ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 17-11-2022

ನೂತನ ನಗರ ಠಾಣೆ ಅಪರಾಧ ಸಂಖ್ಯೆ 200/2022 ಕಲಂ 457, 380 ಐಪಿಸಿ :-

ದಿನಾಂಕ 16/11/2022 ರಂದು 1430 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಚಂದ್ರಕಾಂತ ತಂದೆ ಮಲ್ಲಶೇಟೆಪ್ಪ ವಯ:71 ವರ್ಷ ಜಾತಿ:ಲಿಂಗಾಯತ ಉ:ಖಾಸಗಿ ಕೆಲಸ ಸಾ/ಜೆ.ಪಿ ನಗರ ಬೀದರ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆAದರೆ ಓಣಿಯಲ್ಲಿ ಓಣಿಯ ಜನರೆಲ್ಲರು ಸೇರಿ ಶ್ರೀ.ಸಾಯಿ ಗಣೇಶ ಮಂದಿರ ನಿರ್ಮಿಸಿದ್ದು ಇರುತ್ತದೆ. ಹೀಗಿರುವಾಗ ದಿನಾಂಕ 27/10/2022 ರಂದು ಭಜನ ಕಾರ್ಯಕ್ರಮ ಇದ್ದು ರಾತ್ರಿ 9:00 ಪಿ.ಎಮ್. ಗಂಟೆಯ ವರೆಗೆ ಪೂಜಾ ಮಾಡಿ ಮಂದಿರದ ಬಾಗಿಲು ಮುಚ್ಚಿ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದು ಇರುತ್ತದೆ. ದಿನಾಂಕ 28/10/2022 ರಂದು ಮುಂಜಾನೆ 8:30 ಎ.ಎಮ ಗಂಟೆಯ ಸಮಯಕ್ಕೆ ಮಂದಿರದ ಪೂಜಾರಿಯವರಾದ ಶ್ರೀ ಶೀವಕುಮಾರ ಸ್ವಾಮಿ ರವರು ಫೋನ ಮಾಡಿ ಮಂದಿರದಲ್ಲಿ ಕಳವು ಆಗಿದೆ ಅಂತಾ ತಿಳಿಸಿದ ಕೂಡಲೆ ಮಂದಿರಕ್ಕೆ ಬಂದು ನೋಡಿದಾಗ ಮಂದಿರದ ಬಾಗಿಲಿನ ಕೀಲಿ ಇರಲಿಲ್ಲ ಮಂದಿರದಲ್ಲಿ ಹೋಗಿ ನೋಡಿದಾಗ ಮಂದಿರದಲ್ಲಿ ಇಟ್ಟಿರುವ ಒಂದು ಎಂಪ್ಲಿಫೈಯರ ಅ,ಕಿ 15,000/-ರೂ ನೇದು ಮಂದಿರದಲ್ಲಿ ಇದಿರುವದಿಲ್ಲ. ಮಂದಿರದ ಬಾಗಿಲಿನ ಕೀಲಿ ಮುರಿದು ಮಂದಿರದಲ್ಲಿಯ ಎಂಪ್ಲಿಫೈಯರನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ನೂತನ ನಗರ ಠಾಣೆ ಅಪರಾಧ ಸಂಖ್ಯೆ 201/2022 ಕಲಂ 457, 380 ಐಪಿಸಿ :-

ದಿನಾಂಕ 16/08/2022 ರಂದು 1815 ಗಂಟೆಗೆ ಫಿರ್ಯಾದಿ ಶ್ರೀ. ಕಲಯ್ಯಾ ತಂದೆ ಅಡಯ್ಯಾ ಸ್ವಾಮಿ ವಯ:55 ವರ್ಷ ಜಾತಿ:ಜಂಗಮ ಉ:ಪೂಜಾರಿ ಸಾ/ನವದಗೇರಿ ಬೀದರ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆAದರೆ. ಬೀದರ ನಗರದಲ್ಲಿ ನವದಗೇರಿಯಲ್ಲಿರುವ ಸಂಕಟಮೋಚನ ಹನುಮಾನ ಮಂದಿರದಲ್ಲಿ ಪೂಜಾರಿ ಕೆಲಸ ಮಾಡಿಕೊಂಡು ಉಪಜೀವಿಸಿಕೊಂಡಿದ್ದು ದಿನಾಲು ಮುಂಜಾನೆ 6:00 ಗಂಟೆಗೆ ಮಂದಿರಕ್ಕೆ ಹೋಗಿ ಪೂಜಾ ಅರ್ಚನಾ ಮಾಡಿ ಸಾಯಂಕಾಲ 9:00 ಪಿ.ಎಮ್. ಗಂಟೆಗೆ ಮಂದಿರಕ್ಕೆ ಬೀಗ ಹಾಕಿ ಮರಳಿ ಮನೆಗೆ ಹೋಗುತ್ತೇನೆ. ಹೀಗಿರುವಾಗ ದಿನಾಂಕ 11/11/2022 ರಂದು ಭಜನ ಕಾರ್ಯಕ್ರಮ ಇದ್ದು ರಾತ್ರಿ 10:00 ಪಿ.ಎಮ್. ಗಂಟೆಯ ವರೆಗೆ ಪೂಜೆ ಮಾಡಿ ಮಂದಿರದ ಬಾಗಿಲು ಮುಚ್ಚಿ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದು ಇರುತ್ತದೆ. ದಿನಾಂಕ 12/11/2022 ರಂದು ಮುಂಜಾನೆ 6:00 ಎ.ಎಮ್ ಗಂಟೆಯ ಸಮಯಕ್ಕೆ ನಾನು ಮಂದಿರಕ್ಕೆ ಬಂದು ನೋಡಿದಾಗ ಮಂದಿರದ ಬಾಗಿಲಿನ ಕೀಲಿ ಇರಲಿಲ್ಲ ಮಂದಿರದಲ್ಲಿ ಹೋಗಿ ನೋಡಿದಾಗ ಮಂದಿರದಲ್ಲಿ ಭಕ್ತಾಧಿಗಳು ಕಾಣಿಕೆ ನೀಡಿದ ಸಾಮಾನುಗಳಾದ 1)ದೇವರ ಹುಂಡಿ ಅ.ಕಿ 20,000/-ರೂ. 2)ಒಂದು ಎಂಪ್ಲಿಫೈಯರ ಅ,ಕಿ 15,000/-ರೂ. 3) ಒಂದು ಗ್ಯಾಸ ಸಿಲಿಂಡರ ಅ.ಕಿ.2,000/-ರೂ. 4) ಒಂದು ಗ್ಯಾಸ ಒಲೆ ಅ.ಕಿ 3,500/- ರೂ. ನೇದವುಗಳು ಮಂದಿರದಲ್ಲಿ ಇದ್ದಿರುವದಿಲ್ಲ. ಹೀಗೆ ಒಟ್ಟು ಸೇರಿ 40,500/- ರೂ. ಬೆಲೆ ಬಾಳುವ ಸಾಮಾನುಗನ್ನು ಮಂದಿರದ ಬಾಗಿಲಿನ ಕೀಲಿ ಮುರಿದು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಮಾರ್ಕೇಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 89/2022 ಕಲಂ 379 ಐಪಿಸಿ :-

ದಿನಾಂಕ 16-11-2022 ರಂದು 1330 ಗಂಟೆಗೆ ಫರ್ಯಾದಿ ಶ್ರೀ ಮುಜಾಹೇದ ಅಕ್ಬರ ತಂದೆ ಅಬ್ದುಲ ಕರೀಮ ವಯ 23 ವರ್ಷ ಜಾತಿ ಮುಸ್ಲಿಂ ಸಾ:ನಾವದಗೇರಿ ಬೀದರ ಇವರು ಠಾಣೆಗೆ ಹಾಜರಾಗಿ ತನ್ನ ಬಾಯಿ ಮಾತಿನ ಹೇಳಿಕೆ ಫರ್ಯಾದು ನೀಡಿದ್ದು ಸಾರಾಂಶವೆನAದರೆ, ಇವರ ಹತ್ತಿರ ಒಂದು ಕಪ್ಪು ಬಣ್ಣದ ಪಲ್ಸರ್ ದ್ವಿಚಕ್ರವಾಹನ.ನಂ.ಕೆ.ಎ.38-ಡಬ್ಲೂ-3330 ಇದರ ಚೆಸ್ಸಿ.ನಂ.ಎಮ್.ಡಿ.2ಎ11ಸಿವೈ4ಕೆಸಿಎಲ್54687 ಇದ್ದು ಇದರ ಇಂಜಿನ್.ನA. ಡಿ.ಎಚ್.ವೈ.ಸಿಕೆಎಲ್67150 ನೇದ್ದು ಇರುತ್ತದೆ. ಇದರ ಅ.ಕಿ. 45000/-ರೂ ಇರುತ್ತದೆ. ದಿನಾಂಕ 12-11-2022 ರಂದು ರಾತ್ರಿ 2300 ಗಂಟೆಯ ಸುಮಾರಿಗೆ ಮನೆಯ ಮುಂದೆ ನಿಲ್ಲಿಸಿ ನಂತರ ದಿನಾಂಕ 13-11-2022 ರಂದು ಮುಂಜಾನೆ 0530 ಗಂಟೆಯ ಸುಮಾರಿಗೆ ಎದ್ದು ಮನೆಯ ಹೊರಗೆ ಬಂದು ನೋಡಲಾಗಿ ದ್ವಿಚಕ್ರವಾಹನ ಇರಲಿಲ್ಲಾ. ದ್ವಿಚಕ್ರವಾಹನವನ್ನು ಯಾರೂ ಅಪರಿಚಿತ ಕಳ್ಳರೂ ದಿನಾಂಕ 12-11-2022 ರಂದು ರಾತ್ರಿ 2300 ಗಂಟೆಯಿAದ ದಿನಾಂಕ 13-11-2022 ರಂದು 0530 ಗಂಟೆಯ ಅವಧಿಯಲ್ಲಿ ಕಳವು ಮಾಡಿಕೊಂಡು ಹೋಗಿರುತ್ತಾರೆ. ಕಳವು ಆದ ದ್ವಿಚಕ್ರವಾಹನವನ್ನು ಹುಡುಕಾಡಿ ಠಾಣೆಗೆ ಬಂದು ದೂರು ನೀಡಲು ವಿಳಂಬವಾಗಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.